**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**ಎಸ್ .ಸಿ. ನಂಃ 48/2021**

| |
|---|
| Form No.4(Civil)<br>(R.P.No.57) |

ಪಿ.ಡಬ್ಲ್ಯೂ ನಂಃ **14**

ಸಿ.ಡಬ್ಲ್ಯೂ ನಂಃ **20**

ಸಾಕ್ಷಿಯನ್ನು ದಿನಾಂಕಃ **03-02-2026**

ರಂದು ಪ್ರತಿಜ್ಞೆ ಮಾಡಿಸಲಾಯಿತು

ಸಾಕ್ಷಿದಾರಳ ಹೆಸರು ಃ ಶೀಲಾ ಮೂಗನಗೌಡ್ರು

ಗಂಡನ ಹೆಸರು ಃ ಶಿವಪುತ್ರಪ್ಪ

ವಯಸ್ಸು ಃ 34 ವರ್ಷ

ಉದ್ಯೋಗ ಃ ಪಿಎಸ್ಐ ಜೆಸ್ಕಾಂ ಪೊಲೀಸ ಠಾಣೆ ಕೊಪ್ಪಳ

ವಾಸ ಸ್ಥಳ ಃ ಕೊಪ್ಪಳ

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ದಿಃ **23-11-2020** ರಿಂದ **25-7-2023** ರವರಗೆ ಬೇವೂರು ಪೊಲೀಸ ಠಾಣೆಯಲ್ಲಿ ಪಿಎಸ್ಐ ಆಗಿ ಕೆಲಸ ಮಾಡಿದ್ದೇನೆ.

**2).** ದಿಃ **29-4-2021** ರಂದು ಮಧ್ಯಾಹ್ನ **12** ಗಂಟೆಗೆ ಚಾಸಾ **1** ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ನಮ್ಮ ಠಾಣಾ ಗುನ್ನಾ ಸಂಃ **30/2021** ರಂತೆ ಪ್ರ ವ ವರದಿಯನ್ನು ದಾಖಲು ಮಾಡಿಕೊಂಡೆ. ಸದರಿ ಪ್ರ ವ ವರದಿಯನ್ನು ಸಿಬ್ಬಂದಿರವರ ಮುಖಾಂತರ ಮಾನ್ಯ ನ್ಯಾಯಾಲಯಕ್ಕೆ ಅದರ ಪ್ರತಿಯನ್ನು ಮೇಲಾಧಿಕಾರಿಗಳಿಗೆ ನೀಡಿರುತ್ತೇನೆ. ನಾನು ಸ್ವೀಕರಿಸಿದ ದೂರು ನಿಪಿ **1** ರಂತೆ ಇದ್ದು, ಸಾಕ್ಷಿದಾರರ ಸಹಿಯನ್ನು ನಿಪಿ **1**(ಬಿ) ಎಂದು ಗುರುತಿಸಲಾಯಿತು. ಪ್ರ ವ ವರದಿಯನ್ನು ನಿಪಿ **26** ಎಂದು ಗುರುತಿಸಲಾಯಿತು. ಘೋರ ಪ್ರಕರಣವಾದ್ದರಿಂದ ಮುಂದಿನ ತನಿಖೆಯನ್ನು ಚಾಸಾ **21** ರವರಿಗೆ ವಹಿಸಿಕೊಟ್ಟೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ

**3).** ಚಾಸಾ **1** ರವರ ಜೊತೆ ಅವರ ಸಂಬಂಧಿಕರು ಠಾಣೆಗೆ ಬಂದಿದ್ದರು. ಅವರ ಹೆಸರುಗಳು ನನಗೆ ನೆನಪಿಲ್ಲ. ಠಾಣೆಗೆ ಬರುವಾಗಲೇ ಚಾಸಾ **1** ದೂರನ್ನು ತಯಾರಿಸಿಕೊಂಡು ಬಂದಿದ್ದರು. ನಿಪಿ **1** ರಲ್ಲಿರುವುದು ಚಾಸಾ **1** ರವರ ಹಸ್ತಾಕ್ಷರವಾಗಿರುತ್ತದೆ. ರಾಸಾಯನಿಕವನ್ನು ಸಿಂಪಡಿಸಿದ ಜಮೀನಿನಲ್ಲಿ ಮೃತಳು

ಅಡ್ಡಾಡಿದ್ದರಿಂದ ಆ ಕಾರಣದಿಂದ ಆಕೆ ಮೃತಪಟ್ಟಿರುವ ವಿಚಾರ ಗೊತ್ತಿದ್ದರೂ ಹಾಗೂ ನಿಪಿ 1 ರಲ್ಲಿರುವ ವಿಚಾರ ಸತ್ಯಕ್ಕೆ ದೂರವಾಗಿರುತ್ತದೆ ಎಂದು ಗೊತ್ತಿದ್ದರೂ ಸುಳ್ಳು ದೂರು ದಾಖಲು ಮಾಡಿಕೊಂಡೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ